ಸಾಕ್ಷಿಯನ್ನು ದಿಃ**17.06.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಆರ್.ಎಲ್ ವಕೀಲರಿಂದಃ-**

ನಾನು 18 ವರ್ಷಗಳಿಂದ ವಕೀಲ ವೃತ್ತಿ ನಿರ್ವಹಿಸುತ್ತಿದ್ದೇನೆ. ನ್ಯಾಯಾಲಯದ ಆದೇಶದಂತೆ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ. 2013 ರಲ್ಲಿ ಆದಂತಹ ವಿಲ್ ಡೀಡ್ ಅನ್ನು ನಾನು ಬರೆದ ಕಾರಣ ಆ ಬಗ್ಗೆ ಸಾಕ್ಷಿ ಹೇಳಲು ಬಂದಿರುತ್ತೇನೆ. ನಿಡಿ. 84 ರ ವಿಲ್ ಅನ್ನು ನಾನು ಹುಣಸೂರು ಸಬ್ ರಿಜಿಸ್ಟರ್ ಕಛೇಯಲ್ಲಿ ನೊಂದಾಯಿಸಿರುತ್ತೇನೆ. ಆಗ ನೊಂದಣಿ ಆಗುವ ಕಾಲಕ್ಕೆ ಕೆಂಪೇಗೌಡರು ಮತ್ತು ಸಾಕ್ಷಿದಾರರು ಬಂದಿದ್ದರು. ಸದರಿಯವರನ್ನು ನಾನು ಹುಣಸೂರು ನ್ಯಾಯಾಲಯದಲ್ಲಿ ಮೊದಲ ಬಾರಿ ಭೇಟಿ ಮಾಡಿದ್ದೆ. ಡೀಡ್ ಆಗುವ ಒಂದು ವಾರ ಮೊದಲು ಬಂದು ಸದರಿ ರವರು ನನಗೆ ದಾಖಲೆಗಳನ್ನು ನೀಡಿದ್ದರು. ಸದರಿ ಮೃತ್ಯು ಪತ್ರದಲ್ಲಿ ಎಷ್ಟು ಸ್ವತ್ತುಗಳನ್ನು ನಮೂದು ಮಾಡಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ತುಂಬಾ ವರ್ಷಗಳಗಾದ ಕಾರಣ ಅಂದಾಜು 12 ರಿಂದ 15 ಸ್ವತ್ತುಗಳನ್ನು ನಮೂದಿಸಿರಬಹುದು ಎನ್ನುತ್ತಾರೆ.

ನೊಂದಣಿ ಪತ್ರ ಮಾಡಿಸಿಕೊಳ್ಳುವುದನ್ನು ಎಷ್ಟು ವರ್ಷಗಳಿಂದ ರೂಡಿ ಮಾಡಿಕೊಂಡಿದ್ದಿರಿ ಎಂದರೆ ಸಾಕ್ಷಿ ಅದೇ ಮೊದಲ ಪತ್ರವಾಗಿತ್ತು ಎನ್ನುತ್ತಾರೆ. ಮೃತ್ಯು ಪತ್ರದಲ್ಲಿ ನಮೂದಿಸಿದ ಸರ್ವೆ ನಂ. ಗಳನ್ನು ತುಂಬಾ ವರ್ಷಗಳಾದ ಕಾರಣ ನೆನಪಿಲ್ಲ. ಕೆಂಪೇಗೌಡರಾಗಲಿ ಸಾಕ್ಷಿದಾರ ಬೋರೆಗೌಡ ಮತ್ತು ರಾಮನಾಯಕ ಯಾರೂ ದಾಖಲೆ ಬರೆಸಿಲ್ಲ ಪ್ರತಿವಾದಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೃತ್ಯು ಪತ್ರವನ್ನು ಕೆಂಪೇಗೌಡರ ಮಕ್ಕಳು ಕೆಂಡಗಣ್ಣೇಗೌಡ, ಶಾಂತರಾಜು ಅವರ ಮಗ ವಿನಯ್ ಕುಮಾರ ರವರ ಹೆಸರಿಗೆ ಮೃತ್ಯು ಪತ್ರ ಬರೆಸಿದ್ದರು. ಸದರಿ ಮೃತ್ಯು ಪತ್ರವನ್ನು ಬರೆಯಲು ನನಗೆ ಮಾಹಿತಿಯನ್ನು ಕೆಂಪೇಗೌಡರೆ ಕೊಟ್ಟಿದ್ದರು. ಆಗ ಅವರ ವಯಸ್ಸು ಸರಿ ಸುಮಾರು 70 ರಿಂದ

75 ವರ್ಷ ಆಗಿತ್ತು . ನೊಂದಣಿ ಮಾಡಿದ ದಾಖಲೆಗಳ ಬಗ್ಗೆ ನಾನು ಯಾವುದೆ ಸ್ಟೇಟ್ ಮೆಂಟ್ ಬರೆದಿರುವುದಿಲ್ಲ, ಆದರೆ ಮೃತ್ಯ ಪತ್ರದ ಪ್ರತಿಯನ್ನು ಇಟ್ಟುಕೊಂಡಿದ್ದೆ. ಸದರಿ ಮೃತ್ಯು ಪತ್ರಕ್ಕೆ ಕೆಂಪೇಗೌಡರು ಹೆಬ್ಬಟ್ಟು ಒತ್ತಿದ್ದರು.

**1 ನೇ ಪ್ರತಿವಾದಿ ಪರ ವ್ಯತಿರಿಕ್ತತೆ ಇರುವ ಕಾರಣ ಅರ್ಜಿ ಸಲ್ಲಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುವ ಮೇರೆಗೆ ಅನುಮತಿಸಿದ್ದು,**

**<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎನ್.ಎಸ್.ಜಿ. ವಕೀಲರಿಂದಃ-</u>**

ವಿಲ್ ಪತ್ರ ಬರೆಯುವ ಮೊದಲು ಆರ್.ಟಿ.ಸಿ, ಎಂ.ಆರ್, ಕ್ರಯ ಪತ್ರ ಮತ್ತು ಸಾಗುವಳಿ ಚೀಟಿಗಳನ್ನು ನೋಡಿದ್ದೆ. ಯಾವ ಯಾವ ಸಂಬಂಧ ಜಮೀನುಗಳನ್ನು ನೋಡಿದ್ದೆ ಎಂದರೆ ಈಗ ಹೇಳಲು ಆಗುವುದಿಲ್ಲ. ಸದರಿ ವಿಲ್ ನಲ್ಲಿ ನಮೂದಿಸಿದ ಐಟಂ ನಂ. 1 ಮತ್ತು 2 ರ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ಕೆಂಪೇಗೌಡರ ಸ್ವಯಾರ್ಜಿತ ಸ್ವತ್ತುಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ವಿಲ್ ಅನ್ನು ಬರೆಯುವ 8 -10 ದಿನ ಮೊದಲು ನನಗೆ ಭೇಟಿ ಮಾಡಿ ದಾಖಲೆಗಳನ್ನು ನೀಡಿದ್ದರು. ವಿಲ್ ನ ಡ್ರಾಫ್ಟ ಅನ್ನು ತಯಾರಿಸಿ ಒಂದು ಕಾಪಿಯನ್ನು ಕೆಂಪೇಗೌಡರಿಗೆ ಕೊಟ್ಟಿದ್ದೆ. ಹಾಗೆ ತಯಾರು ಮಾಡಿದ ಡ್ರಾಫ್ಟ್ ಪ್ರಿಂಟ್ ಅನ್ನು ದಾಖಲೆ ಕೊಟ್ಟ 2-3 ದಿನಗಳಲ್ಲಿ ಪ್ರಿಂಟ್ ತೆಗೆದಿದ್ದೆ.

ಕೆಂಪೇಗೌಡರು ನನ್ನ ಬಳಿ ಬರುವ ಕಾಲಕ್ಕೆ ವಯಸ್ಸಾಗಿ ನಿಶಕ್ತರಾಗಿದ್ದರು. ಅವರಿಗೆ ಸ್ಟ್ರೋಕ್ ಆಗಿತ್ತು ಎಂದರೆ ನನಗೆ ಆ ಬಗ್ಗೆ ಮಾಹಿತಿ ಇರಲಿಲ್ಲ, ಅದರೆ ನಡೆಯುವ ಮತ್ತು ಮಾತನಾಡುವ ಸ್ಥಿತಿಯಲ್ಲಿ ಇದ್ದರು. ಸದರಿ ರವರು ಮೊದಲು ಸಹಿ ಮಾಡುತ್ತಿದ್ದು, ವಿಲ್ ಮಾಡುವ ಸಮಯದಲ್ಲಿ ಕೈ ನಡುಕ ಇರುವ ಕಾರಣ ಸಹಿ ಮಾಡಲು ಆಗುವುದಿಲ್ಲವೆಂದು ಹೆಬ್ಬಟ್ಟು ಹಾಕಿದ್ದರು. ಹೆಬ್ಬಟ್ಟಿನ ಗುರುತನ್ನು ಸಬ್ ರಿಜಿಸ್ಟರ್ ಕಛೇರಿಯಲ್ಲಿಯೆ ಮಾಡಿರುತ್ತಾರೆ. ಆಗ ಸಮಯ ಮಧ್ಯಾಹ್ನ 2-3 ಗಂಟೆ ಇರಬಹುದು. ಕೆಂಪೇಗೌಡರ ತಂದೆ ಹೆಸರೇನು ಎಂದು ದಾಖಲೆಯನ್ನು ನೋಡಿದ್ದೆ.

ನಿಡಿ. 84 ಮೃತ್ಯು ಪತ್ರದ ಒಕ್ಕಣಿಕೆಯಲ್ಲಿ ಸ್ವಯಾರ್ಜಿತ ಎಂದು ನಮೂದು ಮಾಡಿದ್ದು, ಆ ಬಗ್ಗೆ ಯಾವುದೆ ದಾಖಲೆ ಪಡೆದಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ದಾಖಲೆ ಬರೆದಿರುವುದಿಲ್ಲ. ಕೆಂಪೇಗೌಡರ ರವರಿಗೆ ಯಾವುದೆ ವಿಲ್ ಬರೆಸಿರುವ ಉದ್ದೇಶ ಇರಲಿಲ್ಲ ಹಾಗೂ ಬರೆಸುವ ಸ್ಥಿತಿಯಲ್ಲೂ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಮಾತನಾಡಲು ಆಗುತ್ತಿರಲಿಲ್ಲ ಹಾಗೂ ಅವರು ಚಿಕಿತ್ಸೆಗೆ ಒಳಪಟ್ಟಿದ್ದರು ಎಂದರೆ ಸರಿಯಲ್ಲ. ಅವರ ಮಾಹಿತಿ ಆಧಾರದ ಮೇಲೆ ವಿಲ್ ಬರೆಯಲಾಗಿತ್ತು ಎನ್ನುತ್ತಾರೆ. ಸದರಿ ವಿಲ್ ನ ಪ್ಯಾರಾ 2 ರಲ್ಲಿ ತೀವ್ರವಾದ ಕಾಯಿಲೆಯಿಂದ ಬಳಲುತ್ತಿದ್ದೆ ಎಂದು ನಮೂದಿಸಿದ್ದು, ಯಾವ ಕಾಯಿಲೆ ಎಂಬ ಬಗ್ಗೆ ವಿಚಾರಿಸಿಲ್ಲ ಎಂದರೆ ಸಾಕ್ಷಿ ವಯೋಸಹಜ ಕಾಯಿಲೆ ಇತ್ತು ಎಂದು ಹೇಳಿದ್ದರು ಎನ್ನುತ್ತಾರೆ. ಸದರಿ ವಿಲ್ ಅನ್ನು ಬರೆಸುವ ಕಾಲಕ್ಕೆ ಕೆಂಪೇಗೌಡರು ಆರೋಗ್ಯವಂತರಾಗಿರಲಿಲ್ಲ, ಹಾಗೆ ಬರೆಸುವ ಮನಸ್ಥಿತಿಯಲ್ಲಿ ಇರಲಿಲ್ಲ ಅದನ್ನು ಅವರ ಮಗ ಮತ್ತು ಮೊಮ್ಮಗ ಸೃಷ್ಟಿ ಮಾಡಿಕೊಂಡದ್ದು ಎಂದರೆ ಸರಿಯಲ್ಲ. ಅವರ ಮಗ ಮತ್ತು ಮೊಮ್ಮಗ ಸಾಕ್ಷಿದಾರರೊಂದಿಗೆ ಷಾಮಿಲಾಗಿ ವಿಲ್ ಅನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ವಿಲ್ ನ ಕೊನೆಯ ಪೇಜ್ ನಲ್ಲಿ ನಮೂದಿಸಿರುವ ಸಾಕ್ಷಿದಾರರ ಹೆಸರು ಮತ್ತು ವಿಳಾಸದ ಬರವಣಿಗೆ ನನ್ನದಲ್ಲ ಅದನ್ನು ಯಾರೂ ಬರೆದರು ಎಂದು ಹೇಳಲು ಈಗ ನನಗೆ ನೆನಪಾಗುತ್ತಿಲ್ಲ. ಸೃಷ್ಟಿಸಿದ ದಾಖಲೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ, ಕೆಂಪೇಗೌಡರು ನನಗೆ ಯಾವುದೆ ದಾಖಲೆಗಳನ್ನು ಕೊಟ್ಟಿಲ್ಲ, ಹಾಗೆ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಸಾಕ್ಷಿಗೆ ಸಂಬಂಧಿಸಿದಂತೆ ಆ ಸಮಯದಲ್ಲಿ ಅಧಾರ ಕಾರ್ಡ ಮತ್ತು ಓಟರ್ ಐಡಿ ಪಡೆದುಕೊಂಡಿದ್ದೆ. ಕೆಂಪೇಗೌಡರ ಆರೋಗ್ಯ ಸ್ಥಿತಿ ಚೆನ್ನಾಗಿದೆ ಎಂಬ ಬಗ್ಗೆ ವೈಧ್ಯಕೀಯ ಪ್ರಮಾಣ ಪತ್ರವನ್ನು ನಾನು ಕೇಳಿಕೊಂಡಿಲ್ಲ,ಸಾಕ್ಷಿ ಪುನಃ ಅವರಿಗೆ ಮಾಹಿತಿ ಕೊಡುವ ಜ್ಞಾನ ಇದ್ದ ಕಾರಣ ಪಡೆದುಕೊಂಡಿದ್ದೇನೆ

ಎನ್ನುತ್ತಾರೆ. ದಾಖಲೆ ಪತ್ರವನ್ನು ಪಕ್ಷಗಾರರು ಜೊತೆಯಿದ್ದ ಕಾರಣ ನಾನು ತಂದಿದ್ದೆ. ಪ್ರತಿವಾದಿ 2 ಮತ್ತು 3 ರವರಿಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.